

★ ನನಗೆ ಯಾರ ಭಯವೂ ಇಲ್ಲ. ಸತ್ಯ ಹೇಳೋದಕ್ಕೆ ಭಯ ಏಕೆ? ನನ್ನನ್ನು ಟ್ರೋಲ್ ಮಾಡಿ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ.

★ ಸ್ಟೀರಿಯೊಟೈಪ್ ವಿಲ್ಲನ್ ಪಾತ್ರಗಳು ಬೋರ್ ಹೊಡೆಸುತ್ತಿರುವುದು ನಿಜ. ಅದಕ್ಕೇ ವೃತ್ತಿ ತೃಪ್ತಿ ಹುಡುಕಿಕೊಂಡು ಇನ್ನೇನೆಲ್ಲವನ್ನೂ ಮಾಡಹೊರಟಿದ್ದೇನೆ.

★ ಕನ್ನಡದಲ್ಲಿ ಸ್ವಮೇಕ್ ಸಿನಿಮಾಗಳನ್ನು ನಿರ್ದೇಶಿಸುವ ಆಸೆ ನನಗೂ ಇದೆ. ಸರಿಯಾದ ಕಥೆ ಸಿಗುತ್ತಿಲ್ಲ.

ಸಂದರ್ಶನ: **ಬಿ.ಎಂ. ಹನೀಫ್**
ಚಿತ್ರ: ಆನಂದ ಬಕ್ಷಿ

'**ನಾ**ನು ಎಡವೂ ಅಲ್ಲ, ಬಲವೂ ಅಲ್ಲ. ಅದೆಲ್ಲ ಇಲ್ಲಿ ಅಪ್ರಸ್ತುತ. ನಾನು ಸತ್ಯ ಹೇಳ್ತಾ ಇದ್ದೀನಾ.. ಇಲ್ಲವಾ.. ಅನ್ನೋದಷ್ಟೇ ಮುಖ್ಯ.'

—ದೃಢವಾಗಿ ಹೇಳಿದರು ಪ್ರಕಾಶ್ ರೈ. ಬೆಂಗಳೂರಿನ ಅವರ ಫ್ಲಾಟ್‌ನಲ್ಲಿ ನಿರಾಳವಾಗಿ ಕುಳಿತು 'ಸುಧಾ' ಜತೆಗೆ ಮಾತುಗಳನ್ನು ಹಂಚಿಕೊಂಡ ಪ್ರಕಾಶ್ ರೈ ಧ್ವನಿಯಲ್ಲಿ ಸಿಟ್ಟು ಮತ್ತು ನೋವು ಎರಡೂ ಮಿಳಿತವಾಗಿತ್ತು. ಅದಕ್ಕೂ ಕಾರಣಗಳಿದ್ದವು.

ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆಯಿಂದ ಪ್ರಕಾಶ್ ರೈ ನಿಜಕ್ಕೂ ವಿಚಲಿತ-ರಾಗಿದ್ದರು. ಸಾಮಾಜಿಕ ಜಾಲತಾಣದಲ್ಲಿ ಗೌರಿ ಕೊಲೆಯನ್ನು ಸಂಭ್ರಮಿಸುವ ದೊಡ್ಡದೊಂದು ಗುಂಪು ಸಕ್ರಿಯವಾಗಿತ್ತು. ಹಾಗೆ ಸಂಭ್ರಮಿಸುವ ಹಲವರು ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಹಿಂಬಾಲಕರು. ಈ ಹಿನ್ನೆಲೆಯಲ್ಲೇ ಸಂದರ್ಶನವೊಂದರಲ್ಲಿ ಪ್ರಕಾಶ್ ರೈ, ಪ್ರಧಾನಿ ಮೋದಿಯವರ ಮೌನವನ್ನು ಪ್ರಶ್ನಿಸಿದ್ದರು. 'ಗೌರಿ ಹತ್ಯೆಯನ್ನು ಸಂಭ್ರಮಿಸುವ ತಮ್ಮ ಅನುಯಾಯಿಗಳ ಬಗ್ಗೆ ಮೋದಿಯವರು ಮೌನವಾಗಿ ಇರುವುದು ಸರಿಯಲ್ಲ. ಅವರು ಮೌನ ಮುರಿದು, ಮಾತನಾಡಬೇಕು. ಏನೂ ಆಗಿಲ್ಲ ಎಂಬಂತೆ ಅವರು ನಟಿಸುತ್ತಿದ್ದಾರೆ. ಇದನ್ನೆಲ್ಲ ನೋಡಿದರೆ ನಾನು ನಟನೆಗಾಗಿ ಗೆದ್ದ ಎಲ್ಲ ಐದು ರಾಷ್ಟ್ರಪ್ರಶಸ್ತಿಗಳನ್ನೂ ಅವರಿಗೇ ಕೊಡೋಣ ಅನ್ನಿಸುತ್ತೆ..' ಎಂದಿದ್ದರು ಪ್ರಕಾಶ್ ರೈ.

ಈ ಹೇಳಿಕೆಯ ಬೆನ್ನಲ್ಲೇ ಸಾಮಾಜಿಕ ಜಾಲತಾಣಗಳಲ್ಲಿ ಹಲವರು ರೈ ವಿರುದ್ಧ ಅಪಪ್ರಚಾರ ಶುರು ಮಾಡಿದ್ದರು. ಟ್ರೋಲ್ ಮಾಡಿ ರೈಯವರ ವಿರುದ್ಧ ಟೀಕೆ, ಬೈಗುಳಗಳ ಸುರಿಮಳೆಯೇ ನಡೆಯಿತು. (ಈಗಲೂ ನಡೆ-ಯುತ್ತಿದೆ. ಅದಕ್ಕೆ ಪ್ರತಿಯಾಗಿ ರೈ ಬೆಂಬಲಿಗರೂ ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ಆರಂಭಿಸಿದ್ದಾರೆ.) ಪ್ರಕಾಶ್ ರೈ ಜತೆಗಿನ ಮಾತುಕತೆ ಈ ಹಿನ್ನೆಲೆ-ಯಲ್ಲೇ ಶುರುವಾಯಿತು.

'ನನಗೆ ಯಾರ ಭಯವೂ ಇಲ್ಲ. ಸತ್ಯ ಹೇಳೋದಕ್ಕೆ ಭಯ ಏಕೆ? ನಾನು ಬಹಳ ಸ್ಪಷ್ಟವಾಗಿದ್ದೇನೆ. ನನ್ನಂಥವರನ್ನು ಟ್ರೋಲ್ ಮಾಡಿ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ಟ್ರೋಲ್ ಮಾಡುವುದರ ಮೂಲಕ ಸಾವಿರಾರು ಜನ ನನ್ನ ವಿರುದ್ಧ ಇದ್ದಾರೆ ಎನ್ನುವ ಭಾವನೆ ಮೂಡಿಸಲು ಅವರು ಯತ್ನಿಸುತ್ತಿ-ದ್ದಾರೆ. ಆದರೆ ನನಗೆ ಗೊತ್ತು. ಅವರು ಇರೋದು ಬೆರಳೆಣಿಕೆಯಷ್ಟು ಜನ.